# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 124
ಸದಸ್ಯರ ಹೆಸರು : ಶ್ರೀ ಟಿ.ಎ.ಶರವಣ
(ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 05/07/2023
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಬಳಿಕೆ ಆಗಿರುವ ಕಂದಾಯ ಇಲಾಖೆಯ ಭೂಮಿ ಪ್ರಮಾಣ ಎಷ್ಟು; ಇದನ್ನು ಮರಳಿ ವಶಕ್ಕೆ ಪಡೆಯಲು ಕೈಗೊಂಡಿರುವ ಕ್ರಮಗಳೇನು; | ರಾಜ್ಯದಲ್ಲಿ ಕಬಳಿಕೆ ಆಗಿರುವ ಕಂದಾಯ ಇಲಾಖೆಯ ಭೂಮಿ ಒಟ್ಟು ವಿಸ್ತೀರ್ಣ 282130-29.09 ಎಕರೆ/ಗುಂಟೆ. (ವಿವರವನ್ನು ಅನುಬಂಧ-1ರಲ್ಲಿ ನೀಡಲಾಗಿದೆ).<br><br>ಒತ್ತುವರಿಯಾಗಿರುವ ಸರ್ಕಾರಿ ಜಮೀನುಗಳನ್ನು ಕೂಡಲೇ ತೆರವುಗೊಳಿಸುವಂತೆ ಹಾಗೂ ಕಬಳಿಕೆಯಾಗಿರುವ ಸರ್ಕಾರಿ ಜಮೀನುಗಳನ್ನು ಹಿಂಪಡೆಯುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್.ಡಿ. 20 ಎಲ್.ಜಿ.ಪಿ. 2020, ದಿನಾಂಕ: 20.01.2020ರನ್ವಯ ಕಟ್ಟುನಿಟ್ಟಿನ ಸೂಚನೆಯನ್ನು ನೀಡಲಾಗಿದೆ. (ಪ್ರತಿಯನ್ನು ಅನುಬಂಧ-2ರಲ್ಲಿ ನೀಡಲಾಗಿದೆ).<br><br>ಸರ್ಕಾರಿ ಜಮೀನಿನಲ್ಲಿನ ಒತ್ತುವರಿಯನ್ನು ತೆರವುಗೊಳಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 104ರಡಿ ಒತ್ತುವರಿದಾರರಿಗೆ ನೋಟೀಸ್ ನೀಡಿ ವಿಚಾರಣೆ ನಡೆಸಿ, ಸರ್ಕಾರದ ವಶಕ್ಕೆ ಪಡೆಯಲು ಕ್ರಮವಹಿಸಲಾಗುತ್ತಿದೆ.<br><br>ಸರ್ಕಾರಿ ಜಮೀನಿನಲ್ಲಿ ಅಕ್ರಮ/ಅನಧಿಕೃತವಾಗಿ ಭೂ ಸಾಧೀನ ಹೊಂದಿರುವ ವ್ಯಕ್ತಿಗಳ ವಿರುದ್ಧ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 192(ಎ)ರಡಿ ಪ್ರಕರಣಗಳನ್ನು ದಾಖಲಿಸಿ ಒತ್ತುವರಿಯನ್ನು ತೆರವುಗೊಳಿಸಲು ಕ್ರಮವಹಿಸಲಾಗುತ್ತಿದೆ.<br><br>ಒತ್ತುವರಿದಾರರ ವಿರುದ್ಧ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿ ಒತ್ತುವರಿಯನ್ನು ತೆರವುಗೊಳಿಸಲು ಕ್ರಮವಹಿಸಲಾಗುತ್ತಿದೆ.<br><br>ಸರ್ಕಾರಿ ಜಮೀನಿನ ಒತ್ತುವರಿಯನ್ನು ತೆರವುಗೊಳಿಸಲು ರಾಜ್ಯ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಕಾರ್ಯಪಡೆಯನ್ನು ರೂಪಿಸಲಾಗಿದೆ. ಅದರಂತೆ, ಎಲ್ಲಾ ಜಿಲ್ಲಾಧಿಕಾರಿಗಳು ಕಾಲಬದ್ಧ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿಕೊಂಡು ಒತ್ತುವರಿಯಾಗಿರುವ ಸರ್ಕಾರಿ ಜಮೀನುಗಳನ್ನು ತೆರವುಗೊಳಿಸಲು ಕ್ರಮವಹಿಸಲಾಗುತ್ತಿದೆ. |

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಕಲಂ 192-ಎ, 192-ಬಿ ಹಾಗೂ 192 ಸಿ ಅಡಿಯಲ್ಲಿ ಸರ್ಕಾರಿ ಸ್ವತ್ತು ಅತಿಕ್ರಮಣ ಮಾಡುವುದು, ಸರ್ಕಾರಿ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸುವುದು, ಒತ್ತುವರಿ ತೆರವು ಮತ್ತಿತರ ಕಾರ್ಯಗಳನ್ನು ನಿರ್ವಹಿಸಲು ಅಧಿಕೃತ ಕಂದಾಯ. ಅಧಿಕಾರಿ ವಿಫಲನಾಗುವುದು, ಭೂ ಕಬಳಿಕೆಗೆ ದುಷ್ಪ್ರೇರಣೆ ನೀಡುವುದು ಮುಂತಾದ ಅಪರಾಧಗಳಿಗಾಗಿ 3 ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು ದಂಡ ವಿಧಿಸಲು ಕಾನೂನಿನಲ್ಲಿ ಅವಕಾಶ ಕಲ್ಪಿಸಲಾಗಿದೆ.

ಸರ್ಕಾರಿ ಜಮೀನು ಒತ್ತುವರಿ ತೆರವು ಪ್ರಕ್ರಿಯೆಯನ್ನು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ತರುವ ನಿಟ್ಟಿನಲ್ಲಿ ಸರ್ಕಾರವು ಉಲ್ಲೇಖ(3)ರ ಸುತ್ತೋಲೆಯಲ್ಲಿ 10 ಸೂಚನೆಗಳನ್ನು ನೀಡಿರುತ್ತದೆ. ತದನಂತರ ಸರ್ಕಾರಿ ಜಮೀನು ಒತ್ತುವರಿ ಪ್ರಕ್ರಿಯೆಯನ್ನು ತೀವ್ರಗೊಳಿಸುವ ಸಲುವಾಗಿ ಸರ್ಕಾರವು ಉಲ್ಲೇಖ(4)ರ ಆದೇಶದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಕಾರ್ಯಪಡೆಗಳನ್ನು ರಚಿಸಿ, ಅನುಸರಿಸಬೇಕಾದ ಕ್ರಮಗಳ ಬಗ್ಗೆ ಸೂಚನೆಗಳನ್ನು ನೀಡಲಾಗಿರುತ್ತದೆ. ಮುಂದುವರೆದು, ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94ರ ಅನ್ವಯ ಒತ್ತುವರಿಯಾಗಿರುವ ಸರ್ಕಾರಿ ಜಮೀನನ್ನು ತೆರವುಗೊಳಿಸಿರುವ ಪ್ರಕರಣಗಳಲ್ಲಿ ಒತ್ತುವರಿದಾರರಿಂದ ದಂಡ ವಸೂಲು ಮಾಡುವ ಬಗ್ಗೆ ಸರ್ಕಾರವು ಉಲ್ಲೇಖ(5)ರ ಸುತ್ತೋಲೆಯಲ್ಲಿ ವಿವರವಾದ ಸೂಚನೆಗಳನ್ನು ನೀಡಲಾಗಿರುತ್ತದೆ.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಸಲ್ಲಿಸಿರುವ ವರದಿ ಸಂಖ್ಯೆ: 05/2018ರ ಬಗ್ಗೆ ಕರ್ನಾಟಕ ವಿಧಾನ ಮಂಡಲದ 2019-20ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯು ಸಭೆಗಳಲ್ಲಿ ಕಬಳಿಕೆಯಾಗಿರುವ ಸರ್ಕಾರಿ ಜಮೀನುಗಳನ್ನು ಹಿಂಪಡೆಯುವ ಪ್ರಕ್ರಿಯೆ ಮಂದ ಗತಿಯಲ್ಲಿಯಲ್ಲಿರುವುದು, ಅನಧಿಕೃತ ಒತ್ತುವರಿದಾರರ ವಿರುದ್ಧ ನಿರೀಕ್ಷಿತ ಮಟ್ಟದಲ್ಲಿ ಕ್ರಮವಾಗದಿರುವುದನ್ನು, ಅಕ್ರಮ/ಸುಳ್ಳು ದಾಖಲೆಗಳ ಆಧಾರದ ಮೇಲೆ ಭೂ ಕಬಳಿಕೆ ಮಾಡಿರುವವರು ಹಾಗೂ ಅಕ್ರಮ ದಾಖಲೆಗಳನ್ನು ಸೃಷ್ಟಿಸಿಕೊಟ್ಟವರ ವಿರುದ್ಧ ಕ್ರಮ ಜರುಗಿಸದೇ ಇರುವುದರಿಂದ ಕೋಟ್ಯಾಂತರ ರೂಪಾಯಿ ಮೌಲ್ಯದ ಸರ್ಕಾರಿ/ಸಾರ್ವಜನಿಕ ಜಮೀನುಗಳು ಸರ್ಕಾರದ ಕೈತಪ್ಪಿ ಹೋಗಿರುವುದೇ ಅಲ್ಲದೆ, ಭೂ ಕಬಳಿಕೆದಾರರು ಕಾನೂನಿನ ಹಿಡಿತದಿಂದ ನುಣುಚಿಕೊಂಡು ಹೋಗುತ್ತಿರುವ ಅಂಶವನ್ನು ಗಂಭೀರವಾಗಿ ಪರಿಗಣಿಸಲಾಗಿದೆ

ಆದ್ದರಿಂದ, ಸರ್ಕಾರಿ ಜಮೀನು ಒತ್ತುವರಿ ತೆರವುಗೊಳಿಸಲು ಹಾಗೂ ಕಬಳಿಕೆಯಾಗಿರುವ ಸರ್ಕಾರಿ ಸ್ವತ್ತುಗಳನ್ನು ಹಿಂಪಡೆಯಲು ಎಲ್ಲಾ ಜಿಲ್ಲಾಧಿಕಾರಿಗಳು ಈ ಕೆಳಕಂಡಂತೆ ತುರ್ತು ಕ್ರಮವಹಿಸತಕ್ಕದ್ದು

1. ಜಿಲ್ಲಾಧಿಕಾರಿಗಳು ಒತ್ತುವರಿ ತೆರವುಗೊಳಿಸಲು ಬಾಕಿ ಇರುವ ಪ್ರಕರಣಗಳು ಹಾಗೂ ಇದುವರೆಗೆ ಸ್ವೀಕೃತವಾಗಿರುವ ದೂರುಗಳನ್ನು ಇನ್ನು 15 ದಿನಗಳ ಅವಧಿಯೊಳಗೆ ಸಂಪೂರ್ಣವಾಗಿ ಪರಾಮರ್ಷಿಸುವುದು
2. ನಗರ ಪ್ರದೇಶ/ ವಾಣಿಜ್ಯ/ಕೈಗಾರಿಕೆ/ಇನ್ನಿತರ ಉದ್ದಿಮೆಗಳಿಗೆ ಅನಧಿಕೃತವಾಗಿ ಸರ್ಕಾರಿ ಜಮೀನು ಬಳಸಿರುವ ಒತ್ತುವರಿ ಪ್ರಕರಣಗಳನ್ನು ಅತಿ ಗಂಭೀರ ಎಂದು ಪರಿಗಣಿಸಿ ಒತ್ತುವರಿದಾರರ ವಿರುದ್ಧ ಕಾನೂನು ಕ್ರಮಗಳನ್ನು ಜರುಗಿಸುವುದು
3. ಜಿಲ್ಲಾಧಿಕಾರಿಗಳು ನಿಗದಿಪಡಿಸುವ ಗುರಿ ಮತ್ತು ಕಾಲಮಿತಿಯಲ್ಲಿ ಕ್ರಮ ಜರುಗಿಸದೇ ಇರುವುದು, ನಿರ್ಲಕ್ಷತನ ತೋರಿಸುವುದು. ವಿಳಂಬ ನೀತಿ ಅನುಸರಿಸುವುದು. ಒತ್ತುವರಿ

ತೆರವುಗೊಳಿಸಲು ವಿಫಲರಾದ ಅಧಿಕಾರಿ, ಸಿಬ್ಬಂಧಿಗಳನ್ನು ಗುರುತಿಸಿ ಅವರುಗಳ ವಿರುದ್ಧ ಕಲಂ 192ಎ/192ಬಿ ಅನ್ವಯ ತಪ್ಪದೇ ಕ್ರಮ ಜರುಗಿಸುವುದಲ್ಲದೆ, ತಕ್ಷಣವೇ ಇಲಾಖೆ ವತಿಯಿಂದ ಶಿಸ್ತು ಕ್ರಮಗಳನ್ನು ಜರುಗಿಸತಕ್ಕದ್ದು. ಹಾಗೆಯೇ ಸದರಿ ಒತ್ತುವರಿ ತೆರವುಗೊಳಿಸಲು ಪರ್ಯಾಯ ವ್ಯವಸ್ಥೆಯನ್ನು ಸಹ ಮಾಡುವುದು.

4. ನಕಲಿ ದಾಖಲೆಗಳ ಆಧಾರದ ಮೇಲೆ ಭೂ ಕಬಳಿಕೆಯಾಗಿದೆಯೆಂದು ಬಂದಿರುವ ದೂರು ಅಥವಾ ಸ್ವತ: ಗಮನಿಸಿರುವ ಪ್ರಕರಣಗಳನ್ನು ತೀರ್ಮಾನಿಸಲು ನಿರ್ದಿಷ್ಟ ಕಾಲಮಿತಿ ನಿಗದಿಪಡಿಸುವುದು, ಇಂತಹ ಪ್ರಕರಣಗಳನ್ನು ಪ್ರತ್ಯೇಕವಾಗಿ ಪರಾಮರ್ಶಿಸುವುದು.

5. ನಕಲಿ ದಾಖಲೆಗಳನ್ನು ಸೃಷ್ಟಿಸುವಲ್ಲಿ ಸರ್ಕಾರಿ ಅಧಿಕಾರಿ/ಸಿಬ್ಬಂಧಿಗಳು ಶಾಮೀಲಾಗಿರುವ ಬಗ್ಗೆ ಮೇಲ್ನೋಟಕ್ಕೆ ಕಂಡು ಬಂದಲ್ಲಿ ಕೂಡಲೇ ಅಂತಹವರನ್ನು ಸೇವೆಯಿಂದ ಅಮಾನತ್ತಿನಲ್ಲಿಡಲು ಕ್ರಮ ಜರುಗಿಸುವುದು.

6. ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಟ್ಟಿರುವುದು ಸಾಬೀತು ಆದಲ್ಲಿ ತಕ್ಷಣವೇ ಅಂತಹವರ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡುವುದು.

7. ನ್ಯಾಯಾಲಯ ತಡೆಯಾಜ್ಞೆ ಜಾರಿಯಲ್ಲಿ ಇದ್ದಲ್ಲಿ, ತಡೆಯಾಜ್ಞೆ ತೆರವು ಮಾಡಿಸಲು ತಕ್ಷಣವೇ ಕ್ರಮ ಜರುಗಿಸುವುದು ಹಾಗೂ ಪ್ರಕರಣದ ಶೀಘ್ರ ಇತ್ಯರ್ಥಕ್ಕೆ ಅಗತ್ಯ ಕ್ರಮ ಕೈಗೊಳ್ಳುವುದು.

8. ಸರ್ಕಾರಿ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ದಾಖಲಾಗಿರುವ ನ್ಯಾಯಾಲಯ ಪ್ರಕರಣಗಳನ್ನು ಪರಿಣಾಮಕಾರಿಯಾಗಿ ಕ್ಷೇತ್ರ ಮಟ್ಟದ ಅಧಿಕಾರಿಗಳು ನಿರ್ವಹಿಸುವುದನ್ನು ಖಚಿತಪಡಿಸಿ ಕೊಳ್ಳುವುದು.

9. ಸರ್ಕಾರದ ಹಿತಾಸಕ್ತಿಗೆ ವಿರುದ್ಧವಾಗಿ ನ್ಯಾಯಾಲಯದ ಆದೇಶವಾಗಿದ್ದಲ್ಲಿ, ಯಾವುದೇ ವಿಳಂಬವಿಲ್ಲದೆ ಕಾನೂನು ಸಲಹೆ ಪಡೆದು, ಮೇಲ್ಮನವಿ ಸಲ್ಲಿಸಲು ಅಗತ್ಯ ಕ್ರಮಗಳನ್ನು ಜರುಗಿಸುವುದು.

10. ಗುತ್ತಿಗೆ ನೀಡಿರುವ ಸರ್ಕಾರಿ ಜಮೀನುಗಳನ್ನು ಪ್ರಕರಣವಾರು ಪರಾಮರ್ಶಿಸಿ, ಗುತ್ತಿಗೆ ಷರತ್ತುಗಳು ಪಾಲನೆಯಾಗಿರುವ ಬಗ್ಗೆ, ಗುತ್ತಿಗೆ ಹಣ ಕಾಲಕಾಲಕ್ಕೆ ಪಾವತಿಸಿರುವ ಬಗ್ಗೆ, ಗುತ್ತಿಗೆ ಮುಗಿದಿರುವ ಪ್ರಕರಣಗಳಲ್ಲಿ ಸರ್ಕಾರಿ ಜಮೀನು ಹಿಂಪಡೆಯುವ ಬಗ್ಗೆ ಜಿಲ್ಲಾಧಿಕಾರಿಗಳು ಪರಾಮರ್ಶಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು

11. ಭೂ ಮಂಜೂರಾತಿಯಾದ ಪ್ರಕರಣಗಳಲ್ಲಿಯೂ ಸಹ ಮಂಜೂರಾತಿ ಷರತ್ತು ಮತ್ತು ನಿಬಂಧನೆಗಳು ಪಾಲನೆಯಾಗಿರುವ ಬಗ್ಗೆ ಪರಾಮರ್ಶಿಸಿ, ಉಲ್ಲಂಘನೆಯಾಗಿರುವ ಪ್ರಕರಣಗಳಲ್ಲಿ ಕಾನೂನು ಕ್ರಮಗಳನ್ನು ಜರುಗಿಸುವುದು.

12. ಇದೇ ರೀತಿ ಭೂ ಸುಧಾರಣಾ ಕಾಯಿದೆ ಉಲ್ಲಂಘನೆಯಾಗಿರುವ ಪ್ರಕರಣಗಳನ್ನು ಸಹ ಗುರುತಿಸಿ, ಪರಾಮರ್ಶಿಸಿ ಅಗತ್ಯ ಕಾನೂನು ಕ್ರಮಗಳನ್ನು ಜರುಗಿಸುವುದು.

13. ಒತ್ತುವರಿ ತೆರವು ಮಾಡಿ ಸರ್ಕಾರದ ವಶಕ್ಕೆ ಪಡೆದ ಜಮೀನುಗಳು ಪುನ: ಒತ್ತುವರಿಯಾಗದಂತೆ ಸಂರಕ್ಷಣಾ ಕ್ರಮ ಅಂದರೆ ಸಂದರ್ಭಾನುಸಾರ ಸಾರ್ವಜನಿಕ ಉದ್ದೇಶಕ್ಕೆ ಮೀಸಲಿಟ್ಟು, ಪುನ: ಒತ್ತುವರಿಯಾಗದಂತೆ ತಂತಿ ಬೇಲಿ ಹಾಕಿಸುವುದು, ಸುತ್ತಲೂ ಕಂದಕ ನಿರ್ಮಿಸುವುದು, ಅಥವಾ ನಾಮ ಫಲಕ ಹಾಕಿಸುವ ಕಾಮಗಾರಿಗಳನ್ನು ಮಾಡಿಸುವುದು.

14 ದಿನಾಂಕ 02.02.2019ರ ಸುತ್ತೋಲೆಯಂತೆ ಒತ್ತುವರಿದಾರರಿಂದ ದಂಡ ವಸೂಲಿ ಮಾಡಿ, ಸಾಧಿಸಿದ ಪ್ರಗತಿ ಬಗ್ಗೆ ವರದಿ ಸಲ್ಲಿಸುವುದು

15. ಎಲ್ಲಾ ಜಿಲ್ಲಾಧಿಕಾರಿಗಳು ಸರ್ಕಾರಿ ಜಮೀನು ಒತ್ತುವರಿ ತೆರವು ಹಾಗೂ ಮೇಲ್ಕಂಡ ಅಂಶಗಳ ಬಗ್ಗೆ ತಿಂಗಳಿಗೊಮ್ಮೆ ತಪ್ಪದೇ ಪರಾಮರ್ಶಿಸುವುದು.

ಮೇಲ್ಕಂಡ ಸೂಚನೆಗಳನ್ನು ಜಿಲ್ಲಾಧಿಕಾರಿಗಳು ತಪ್ಪದೇ ಪಾಲಿಸತಕ್ಕದ್ದು

(ಎನ್. ಮಂಜುನಾಥ ಪ್ರಸಾದ್) 20/1/2020
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಕಂದಾಯ ಇಲಾಖೆ

ಇವರಿಗೆ :-

1. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ ಕಳುಹಿಸುತ್ತಾ ಸದರಿ ಸುತ್ತೋಲೆಯನ್ನು ಮುಂದಿನ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಕೋರಿದೆ.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ, ಬೆಂಗಳೂರು ಇವರಿಗೆ ಸರ್ಕಾರಿ ಜಮೀನು ಒತ್ತುವರಿ ತೆರವುಗೊಳಿಸುವುದು, ಒತ್ತುವರಿದಾರರ ವಿರುದ್ಧ ಕ್ರಮ ಜರುಗಿಸುವುದು. ಒತ್ತುವರಿ ತೆರವುಗೊಳಿಸಲು ವಿಫಲರಾಗಿರುವ ಅಧಿಕಾರಿಗಳು, ಹಾಗೂ ಭೂ ಕಬಳಿಕೆಗೆ ದುಷ್ಪ್ರೇರಣೆ ನೀಡುವ/ ನಕಲಿ ದಾಖಲೆಗಳನ್ನು ಸೃಷ್ಟಿಸಲು ಶಾಮೀಲಾದ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಕಾನೂನು/ಶಿಸ್ತು ಕ್ರಮಗಳನ್ನು ಜರುಗಿಸುವುದು ಇತ್ಯಾದಿಗಳ ಬಗ್ಗೆ ಸಮನ್ವಯ ಕ್ರಮವಹಿಸಿ ಸರ್ಕಾರಕ್ಕೆ ಪ್ರತಿ ಮಾಹೆ ವರದಿ ಸಲ್ಲಿಸತಕ್ಕದ್ದು.
3. ಎಲ್ಲಾ ಪ್ರಾದೇಶಿಕ ಆಯುಕ್ತರುಗಳಿಗೆ
4 ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಭೂ ಕಬಳಿಕೆಯಂತಹ ಪ್ರಕರಣಗಳು ಕಂಡುಬಂದ ತಕ್ಷಣ ನಿಯಮಾನುಸಾರ ಕ್ರಮವಹಿಸಿ ಕರ್ನಾಟಕ ಭೂ ಕಬಳಿಕೆ ವಿಶೇಷ ನ್ಯಾಯಾಲಯದಲ್ಲಿ ಭೂ ಕಬಳಿಕೆದಾರರ ವಿರುದ್ಧ ಪ್ರಕರಣವನ್ನು ದಾಖಲಿಸಲು ಕ್ರಮವಹಿಸತಕ್ಕದ್ದು.
5. ಎಲ್ಲಾ ಉಪ ವಿಭಾಗಗಳ ಉಪ ವಿಭಾಗಾಧಿಕಾರಿಗಳಿಗೆ (ಜಿಲ್ಲಾಧಿಕಾರಿಗಳ ಮೂಲಕ)
6 ಎಲ್ಲಾ ತಾಲ್ಲೂಕುಗಳ ತಹಸೀಲ್ದಾರರುಗಳಿಗೆ (ಜಿಲ್ಲಾಧಿಕಾರಿಗಳ ಮೂಲಕ)
7 ಹೆಚ್ಚುವರಿ ಪ್ರತಿಗಳು

ಪ್ರತಿಯನ್ನು:

1 ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
2 ಎಲ್ಲಾ ಅಪರ/ಉಪ/ಅಧೀನ ಕಾರ್ಯದರ್ಶಿಗಳು, ಕಂದಾಯ ಇಲಾಖೆ

# ಅನುಬಂಧ- 3

| ಕ್ರ.ಸಂ | ಜಿಲ್ಲೆ | ರಾಜ್ಯದ ನೂರಾರು ಎಕರೆ ಗೋಮಾಳಗಳನ್ನು ಪರಭಾರೆ ಮಾಡಲಾಗುತ್ತಿದ್ದು, ಕಳೆದ 2019, 2020, 2021, 2022ರ ಅವಧಿಯಲ್ಲಿ ಎಷ್ಟು ಗೋಮಾಳ ಭೂಮಿಯನ್ನು ಯಾವ ಯಾವ ಸಂಸ್ಥೆಗಳಿಗೆ ನೀಡಿರುವ ವಿವರಗಳು |
|---|---|---|
| 1 | ಬೆಂಗಳೂರು ನಗರ | **1 ಯಲಹಂಕ ಯಲಹಂಕ ಸಿಂಗನಾಯಕನಹಳ್ಳಿ, 111 8-37 ಆದಿಚುಂಚನಗಿರಿ ಮಹಾಸಂಸ್ಥಾನ ಮಠ 14.03.2019**<br>**2 ಯಲಹಂಕ ಹೆಸರಘಟ್ಟ, ಇಟಗಲ್‌ಪುರ 50 3-38 ಕರ್ನಾಟಕ ರಾಜ್ಯಪಾಲರ ಸಚಿವಾಲಯ ನೌಕರರ ಗೃಹ ನಿರ್ಮಾಣ ಸಂಘ 28.02.2020**<br>**3 ಯಲಹಂಕ ಹೆಸರಘಟ್ಟ, ಹುರಳಿಚಿಕ್ಕನಹಳ್ಳಿ, 69 9-32 ರಾಷ್ಟ್ರೋತ್ಥಾನ ಪರಿಷತ್ ಸಂಸ್ಥೆ, ಬೆಂಗಳೂರು. 22.02.2022**<br>**4 ಯಲಹಂಕ ಯಲಹಂಕ ಚಿಕ್ಕಬೆಟ್ಟಹಳ್ಳಿ, 14 2-00 ಸೊಸೈಟಿ ಫಾರ್ ವುಮನ್ ಡೆವಲಪ್‌ಮೆಂಟ್ ಸಂಸ್ಥೆ 19.12.2021**<br>**5 ಯಲಹಂಕ ಜಾಲ ತಿಮ್ಮಸಂದ್ರ 19 7-00 ಕರ್ನಾಟಕ ರಾಜ್ಯ ಲಾನ್ ಟೆನಿಸ್ ಅಸೋಸಿಯೇಷನ್ ಕೆ.ಎಲ್.ಟಿ.ಎ ಟೆನ್ನಿಸ್ ಸ್ಟೇಡಿಯಂ, ಕಬ್ಬನ್ ಪಾರ್ಕ್, ಬೆಂಗಳೂರು 16.12.2022**<br>**6 ಬೆಂಗಳೂರು ಉತ್ತರ ಯಶವಂತಪುರ ಕೆರೆಗುಡ್ಡದಹಳ್ಳಿ, 8 4-00 ಬಾಲಾಜಿ ಎಜುಕೇಷನ್ ಟ್ರಸ್ಟ್ 03.02.2021**<br>**7 ಬೆಂಗಳೂರು ಉತ್ತರ ಯಶವಂತಪುರ ಚಿಕ್ಕಬಾಣವಾರ 57 7-00 ಶ್ರೀ ರಾಘವೇಂದ್ರ ಎಜುಕೇಷನ್ ಇನ್‌ಸ್ಟಿಟ್ಯೂಷನ್ ಸೊಸೈಟಿ 01.10.2022**<br>**8 ಬೆಂಗಳೂರು ಉತ್ತರ ದಾಸನಪುರ ಕಮ್ಮಸಂದ್ರ 65 3-24 ಉತ್ತರ ಕರ್ನಾಟಕ ಸಂಘ-ಸಂಸ್ಥೆಗಳ ಮಹಾಸಂಸ್ಥೆ 17.08.2022**<br>**9 ಬೆಂಗಳೂರು ದಕ್ಷಿಣ ಬೇಗೂರು ಎಳ್ಳೇನಹಳ್ಳಿ, 49 8-32 ಆದಿಚುಂಚನಗಿರಿ ಮಹಾಸಂಸ್ಥಾನ ಮಠ 20.07.2019**<br>**10 ಬೆಂಗಳೂರು ದಕ್ಷಿಣ ಕೆಂಗೇರಿ ಕುಂಬಳಗೋಡು 30 3-00 ಕರ್ನಾಟಕ ರಾಜ್ಯ ಗೊಲ್ಲ (ಯಾದವ್) ಸಂಘ(ರಿ) 18.08.2020**<br>**11 ಬೆಂಗಳೂರು ದಕ್ಷಿಣ ಉತ್ತರಹಳ್ಳಿ, ವಡ್ಡರಪಾಳ್ಯ 175 25-00 ಕರ್ನಾಟಕ ಸಿಲ್ಕ್‌ಸ್ ಸ್ಪಿನ್ನರ್ಸ್ ಮತ್ತು ವೀವರ್ಸ್ ಹೌಸ್ ಬಿಲ್ಡಿಂಗ್ ಕೋ-ಅಪರೇಟೀವ್ ಸೊಸೈಟಿ ಲಿ. 05.09.2020**<br>**12 ಬೆಂಗಳೂರು ದಕ್ಷಿಣ ತಾವರೆಕೆರೆ ಕುರುಬರಹಳ್ಳಿ, 89 35-33 ಜನಸೇವಾ ಟ್ರಸ್ಟ್ 13.09.2022** |
| 2 | ಬೆಂಗಳೂರು ಗ್ರಾಮಾಂತರ | <u>ದೇವನಹಳ್ಳಿ ತಾಲ್ಲೂಕು-</u> ಆದೇಶ ಸಂಖ್ಯೆ: ಎಲ್‌ಎನ್‌ಡಿ(ದ) ಎಸ್‌ಆರ್:06/2018-19, ದಿನಾಂಕ:05-08-2019 ರಂದು ದೇವನಹಳ್ಳಿ ತಾಲ್ಲೂಕು, ಬೊಮ್ಮವಾರ ಗ್ರಾಮದ ಸನಂ 36ರಲ್ಲಿ 2-17 ಎ/ಗುಂ ಜಮೀನನ್ನು ಶ್ರೀ ಗುರುಗುಂಡ ಬ್ರಹ್ಮೇಶ್ವರಸ್ವಾಮಿ ವಿದ್ಯಾ ಸಂಸ್ಥೆ (ರಿ) ರವರಿಗೆ ಶಾಲಾ ಕಾಲೇಜು ವಿದ್ಯಾರ್ಥಿ ನಿಲಯಗಳ ಸ್ಥಾಪನೆ ಹಾಗೂ ವಿವಿದ್ಧೋದ್ದೇಶಗಳಿಗಾಗಿ ಮಂಜೂರು ಮಾಡಲಾಗಿದೆ. <u>ದೊಡ್ಡಬಳ್ಳಾಪುರ ತಾಲ್ಲೂಕು-</u> ಮಂಜೂರು ಮಾಡಿರುವುದಿಲ್ಲ. <u>ಹೊಸಕೋಟೆ ತಾಲ್ಲೂಕು</u>- ಆದೇಶ ಸಂಖ್ಯೆ: ಆರ್‌ಡಿ 219 ಎಲ್‌ಜಿಬಿ 2021 (ಇ) ಬೆಂಗಳೂರು, ದಿನಾಂಕ:19-03-2022, ಎಲ್‌ಎನ್‌ಡಿ(ಹೊ) ಸಿಆರ್:91/2021-22 ರಂತೆ ರವರಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ ಮಂಜೂರು ಮಾಡಲಾಗಿದೆ. ನೆಲಮಂಗಲ ತಾಲ್ಲೂಕು- ಆದೇಶ ಸಂಖ್ಯೆ ಎಲ್‌ಎನ್‌ಡಿ(ನೆ) ಸಿಆರ್:11/2020-21 ದಿನಾಂಕ: 17-12-2020 ರಂದು ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಯಲಚಗೆರೆ ಗ್ರಾಮದ ಸ.ನಂ 74 ರಲ್ಲಿ 9-20 ಎ/ಗುಂಟೆ ಜಮೀನನ್ನು ಸಿದ್ದಗಂಗಾಮಠ ತುಮಕೂರು ರವರಿಗ ಶೈಕ್ಷಣಿಕ ಮತ್ತು ಸಾಮಾಜಿಕ ಉದ್ದೇಶಕ್ಕಾಗಿ ಮಂಜೂರು ಮಾಡಲಾಗಿದೆ. ಆದೇಶ ಸಂಖ್ಯೆ: ಎಲ್‌ಎನ್ನಿ(ನೆ)ಸಿಆರ್:32/2020-21 ದಿನಾಂಕ:19-01-2021 ರಂದು <u>ನೆಲಮಂಗಲ ತಾಲ್ಲೂಕು-</u> ತ್ಯಾಮಗೊಂಡ್ಲು ಹೋಬಳಿ, ದೊಡ್ಡೇರಿ ಗ್ರಾಮದ ಸ.ನಂ 23 ರಲ್ಲಿ 2-00 ಎಕರೆ ಜಮೀನನ್ನು ಶ್ರೀ ಗುರುದೇವ ಸೇವಾ ಸಂಸ್ಥೆ (ರಿ) ಸಮಾಧಾನ ಆಶ್ರಮ ರವರಿಗೆ ಅಂದ ಮಕ್ಕಳ ಶಾಲೆ ತೆರಯುವ ಉದ್ದೇಶಕ್ಕಾಗಿ ಮಂಜೂರು ಮಾಡಲಾಗಿದೆ.<br>ಆದೇಶ ಸಂಖ್ಯೆ: ಎಲ್‌ಎನ್(ನೆ) ಸಿಆರ್:138/17-18, ದಿನಾಂಕ: 12-02-2021 ರಂದು ನೆಲಮಂಗಲ ತಾಲ್ಲೂಕು ಕಸಬಾ ಹೋಬಳಿ, ಹಂಚೀಪುರ ಗ್ರಾಮದ ಸ.ನಂ 121 ರಲ್ಲಿ 0-30 ಗುಂಟೆ ಜಮೀನನ್ನು 66/11 ಕೆ.ವಿ ವಿದ್ಯುತ್ ಉಪ ಕೇಂದ್ರ ರವರಿಗೆ 66/11 ಕೆ.ವಿ ವಿದ್ಯುತ್ ಉಪ ಕೇಂದ್ರ ಉದ್ದೇಶಕ್ಕಾಗಿ ಮಂಜೂರು ಮಾಡಲಾಗಿದೆ. |
| 3 | ಬಾಗಲಕೋಟೆ | ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ ತಾಲ್ಲೂಕಿನ ಶಿಗಿಕೇರಿ ಗ್ರಾಮದ ರಿ.ಸ.ನಂ 64/ಅ16 ರಲ್ಲಿನ 5-00 ಎ/ಗುಂಟೆ ಗೋಮಾಳ ಜಮೀನನ್ನು ದಿನಾಂಕ:24-01-2022 ರಂದು ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಪರಿಶಿಷ್ಟ ಜನಾಂಗದವರ ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಸೌಲಭ್ಯಗಳನ್ನು ಕಲ್ಪಿಸುವ ಉದ್ದೇಶಕ್ಕಾಗಿ ಪರಿವರ್ತನ ಸಾಮಾಜಿಕ ಸೇವಾ ಸಂಘ (ರಿ) ಮುಧೋಳ ಇವರಿಗೆ ಹಂಚಿಕೆ ಮಾಡಲಾಗಿರುತ್ತದೆ. |

| | | |
|---|---|---|
| 4 | ಬೆಳಗಾವಿ | 1. ಬೆಳಗಾವಿ ತಾಲ್ಲೂಕಿನ ಪೀರಣವಾಡಿ ಗ್ರಾಮದ ರಿ.ಸ.ನಂ.21 ರಲ್ಲಿ 10 ಗುಂ ಕುರುಬ ಸಮುದಾಯ ಭವನ ನಿರ್ಮಿಸಲು ಕರ್ನಾಟಕ ಕುರುಬ ಸಂಘ ಬೆಂಗಳೂರು ದಿನಾಂಕ:04-02-2019 ರಂದು ಮಂಜೂರು ಮಾಡಲಾಗಿದೆ.<br>2. ಬೈಲಹೊಂಗಲ ತಾಲ್ಲೂಕಿನ ಕಡಸಗಟ್ಟಿ ಗ್ರಾಮದ ರಿ.ಸ.ನಂ.81 ರಲ್ಲಿ 4 ಎಕರೆ ಜಮೀನನ್ನು ಕಾರ್ಯನಿರ್ವಾಹಕ ಅಭಿಯಂತರರು (ವಿಬ್ಯ.ಕಾ.ವಿಭಾಗ.ಕ.ವಿ.ಪ.ನಿ.ನಿ) ಇವರಿಗೆ 110 ಕೆವಿ ವಿದ್ಯುತ್ ಕೇಂದ್ರ ಸ್ಥಾಪಿಸಲು ಮಂಜೂರು ಮಾಡಲಾಗಿದೆ<br>3. ಬೈಲಹೊಂಗಲ ತಾಲ್ಲೂಕಿನ ಬಿದರಹಟ್ಟಿ ಗ್ರಾಮದ ರಿ.ಸ.ನಂ.9, 10, 12, 13, (49-35) ರಲ್ಲಿ ಪೋಲೀಸ್ ಮಹಾನಿರ್ದೇಶಕರು ರಾಜ್ಯ ವಿಪತ್ತು ಸ್ಪಂದನಾಪಡೆ ಬೆಂಗಳೂರುಕ್ಕಾಗಿ ಇವರಿಗೆ ಮಂಜೂರು ಮಾಡಲಾಗಿದೆ<br>4. ಕಿತ್ತೂರು ತಾಲ್ಲೂಕಿನ ಕಿತ್ತೂರು ಗ್ರಾಮದ ರಿ.ಸ.ನಂ.87 ರಲ್ಲಿ 4 ಎಕರೆ ಜಮೀನನ್ನು ನೂತನ ಬಸ್ ನಿಲ್ದಾಣ ಘಟಕಕ್ಕಾಗಿ ಎನ್.ಎಬ್ಲ್ಯೂ.ಎಸ್ ಆರ್ಟಿಸಿ ಬೆಳಗಾವಿ ಇವರಿಗೆ ಮಂಜೂರು ಮಾಡಲಾಗಿದೆ<br>5. ಗೋಕಾಕ ತಾಲ್ಲೂಕಿನಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಬೆಳಗಾವಿ ಇವರಿಗೆ 110 ಕೆವಿ ವಿದ್ಯುತ್ ಉಪಕೇಂದ್ರ ಸ್ಥಾಪಿಸುವ ಕುರಿತು ಕೊಣ್ಣೂರ ಗ್ರಾಮದ ರಿ.ಸ.ನಂ.800/1 ರಲ್ಲಿ 2 ಎಕರೆ ಜಮೀನನ್ನು ನೀಡಲಾಗಿದೆ.<br>6. ಗೋಕಾಕ ತಾಲ್ಲೂಕಿನಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಬೆಳಗಾವಿ ಇವರಿಗೆ 110 ಕೆವಿ ವಿದ್ಯುತ್ ಉಪಕೇಂದ್ರ ಸ್ಥಾಪಿಸಲು ಖನಗಾಂವ ಗ್ರಾಮದ ರಿ.ಸ.ನಂ.1/ಅ/2/ಪೈಕಿ-ಪಿ2 ರಲ್ಲಿ 2 ಎಕರೆ 15 ಗುಂ ಜಮೀನು ಮಂಜೂರು ಮಾಡಲಾಗಿದೆ.<br>7. ಮೂಡಲಗಿ ತಾಲ್ಲೂಕಿನಲ್ಲಿ ಅರಭಾಂವಿ ಗ್ರಾಮದ ರಿ.ಸ.ನಂ.497/1 ನೇದ್ದರಲ್ಲಿ ಕಾರ್ಯನಿರ್ವಾಹಕ ಅಭಿಯಂತರರು, ವಿದ್ಯುತ್ ಸರಬರಾಜು ಕಾರ್ಯಪಾಲನಾ ವಿಭಾಗಕ್ಕೆ 2 ಎಕರೆ ಜಮೀನನ್ನು ಹಾಗೂ ಘಟಪ್ರಭಾ 2 ಎಕರೆ ಜಮೀನು ಮಂಜೂರು ಮಾಡಲಾಗಿದೆ.<br>8. ಮೂಡಲಗಿ ತಾಲ್ಲೂಕಿನಲ್ಲಿ ಅರಭಾಂವಿ ಗ್ರಾಮದ ರಿ.ಸ.ನಂ.523/1 ರಲ್ಲಿ ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯತ್ ಅರಭಾಂವಿ ಇವರಿಗೆ 2 ಎಕರೆ ಜಮೀನು ಮಂಜೂರು ಮಾಡಲಾಗಿದೆ. |
| 5 | ಬಳ್ಳಾರಿ | ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ. |
| 6 | ಬೀದರ್ | ಬೀದರ್ ಜಿಲ್ಲೆಯಲ್ಲಿ ಕಳೆದ 04 ವರ್ಷದಲ್ಲಿ ಗೋಮಾಳ ಜಮೀನು ಸಂಸ್ಥೆಗಳಿಗೆ ನೀಡಿರುವುದಿಲ್ಲ. |
| 7 | ಚಾಮರಾಜನಗರ | ಚಾಮರಾನಗರ ಜಿಲ್ಲೆಯಲ್ಲಿ ಕಳೆದ 2019-20, 2021-22ರ ಅವಧಿಯಲ್ಲಿ ಯಾವುದೇ ಸಂಸ್ಥೆಗಳಿಗೆ ಗೋಮಾಳ ಜಮೀನನ್ನು ನೀಡಿರುವುದಿಲ್ಲ. |
| 8 | ಚಿಕ್ಕಬಳ್ಳಾಪುರ | ಈ ಜಿಲ್ಲೆಯಲ್ಲಿ ಗೋಮಾಳ ಜಮೀನನ್ನು ಯಾವುದೇ ಖಾಸಗಿ ಸಂಘಸಂಸ್ಥೆಗಳಿಗೆ ಮಂಜೂರು ಮಾಡಿರುವ ಪ್ರಕರಣಗಳು ಯಾವುವು ಇರುವುದಿಲ್ಲ. |
| 9 | ಚಿಕ್ಕಮಗಳೂರು | (01) ಕಡೂರು ಬೀರೂರು ಕಾವಲು 4/ಪಿ1-ಪಿ12 0-08 ಭಾರತೀಯ ವೈದ್ಯಕೀಯ ಸಂಘ-Blood Bank (02) ಕೊಪ್ಪ, ಬೈರೇದೇವರು 211 0-05 ಲ್ಯಾಂಪ್ಸ್ ಸಹಕಾರ ಸಂಘ |
| 10 | ಚಿತ್ರದುರ್ಗ | ಚಿತ್ರದುರ್ಗ ಜಿಲ್ಲಾ ವ್ಯಾಪ್ತಿಯಲ್ಲಿ ಕಳೆದ 2019, 2020, 2021, 2022ರ ಅವಧಿಯಲ್ಲಿ ಯಾವುದೇ ಗೋಮಾಳ ಭೂಮಿಯನ್ನು ಯಾವುದೇ ಸಂಸ್ಥೆಗಳಿಗೆ ಮಂಜೂರು ಮಾಡಲಾಗಿರುವುದಿಲ್ಲ. |
| 11 | ದಕ್ಷಿಣ ಕನ್ನಡ | ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟಂತೆ ಕಳೆದ 2019, 2020, 2021, 2022 ರ ಅವಧಿಯಲ್ಲಿ ಗೋಮಾಳ ಜಾಗವನ್ನು ಸಂಸ್ಥೆಗಳಿಗೆ ನೀಡಿರುವುದಿಲ್ಲ. |
| 12 | ದಾವಣಗೆರೆ | ಗೋಮಾಳ ಜಮೀನುಗಳನ್ನು ಗುತ್ತಿಗೆಯಾಗಿ ನೀಡಲಾಗಿರುತ್ತದೆ ವಿನಹ: ಯಾವುದನ್ನು ಪೂರ್ಣ ಮಂಜೂರಾತಿ/ಪರಭಾರೆ ನೀಡಿರುವುದಿಲ್ಲ. |
| 13 | ಧಾರವಾಡ | ಧಾರವಾಡ ಜಿಲ್ಲೆಯಲ್ಲಿ 2019, 2020, 2021, 2022 ಅವಧಿಯಲ್ಲಿ ಗೋಮಾಳ ಭೂಮಿಯನ್ನು ಯಾವುದೇ ಸಂಸ್ಥೆಗಳಿಗೆ ನೀಡಿದ್ದು ಇರುವುದಿಲ್ಲ. |
| 14 | ಗದಗ | ಜಿಲ್ಲೆಯಲ್ಲಿ ಕಳೆದ 2019, 2020, 2021, 2022ರ ಅವಧಿಯಲ್ಲಿ ಯಾವುದೇ ಗೋಮಾಳ ಭೂಮಿಯನ್ನು ಪರಭಾರೆ ಮಾಡಿರುವುದಿಲ್ಲ. |
| 15 | ಹಾಸನ | ಹಾಸನ ಜಿಲ್ಲೆಗೆ ಸಂಬಂಧಿಸಿದಂತೆ ಈ ರೀತಿಯ ಪ್ರಕರಣಗಳು ಯಾವುದು ಇರುವುದಿಲ್ಲ. |
| 16 | ಹಾವೇರಿ | ಹಾವೇರಿ ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ. |
| 17 | ಕಲಬುರಗಿ | ಕಲಬುರಗಿ ಜಿಲ್ಲೆಯಲ್ಲಿ ಸರ್ಕಾರಿ ಗೋಮಾಳ ಜಮೀನು ಯಾವುದೇ ಸಂಘ ಸಂಸ್ಥೆಗಳಿಗೆ ಮಂಜೂರಾತಿ ಮಾಡಿರುವುದಿಲ್ಲ. |
| 18 | ಕೊಡಗು | ಕೊಡಗು ಜಿಲ್ಲೆಯಲ್ಲಿ ಅಂತಹ ಪ್ರಕರಣಗಳಿರುವುದಿಲ್ಲ. |
| 19 | ಕೋಲಾರ | ಕೋಲಾರ ತಾಲ್ಲೂಕಿನ ಹೊಳಲಿ ಗ್ರಾಮದಲ್ಲಿ ಸ.ನಂ 103ರ ಗೋಮಾಳ ಜಮೀನಿನ ಪೈಕಿ 16-00 ಎಕರೆ ಜಮೀನನ್ನು 2019ನೇ ಸಾಲಿನಲ್ಲಿ 30 ವರ್ಷಗಳ ಅವಧಿಗೆ ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ಬೆಂಗಳೂರು ರವರಿಗೆ ಗುತ್ತಿಗೆ ಮಂಜೂರಾತಿ ನೀಡಲಾಗಿರುತ್ತದೆ. 2020, 2021, 2022 ರ ಅವಧಿಯಲ್ಲಿ ಯಾವುದೇ ಸಂಸ್ಥೆಗಳಿಗೆ ನೀಡಲಾಗಿರುವುದಿಲ್ಲ. |
| 20 | ಕೊಪ್ಪಳ | ಜಿಲ್ಲೆಯಲ್ಲಿ ಕಳೆದ 2019, 2020, 2021, 2022ರ ಅವಧಿಯಲ್ಲಿ ಗೋಮಾಳ ಭೂಮಿಯನ್ನು ಸಂಘ/ಸಂಸ್ಥೆಗೆ ನೀಡಿರುವ ಪ್ರಕರಣಗಳು ಇರುವುದಿಲ್ಲ. |
| 21 | ಮಂಡ್ಯ | ಸರ್ಕಾರದ ಆದೇಶ ಸಂಖ್ಯೆ : ಕಂಇ 8 ಎಲ್‌ಜಿಮ್ಮ 2022, ದಿನಾಂಕ : 17-09-2022 ರಂತೆ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕು ಕಸಬಾ ಹೋಬಳಿ ಮಹದೇವಪುರ ಗ್ರಾಮದ ಸ.ನಂ: 411 ರಲ್ಲಿ 30 ಎಕರೆ ಜಮೀನನ್ನು ಇಸ್ಕಾನ್ ಸಂಸ್ಥೆ ಬೆಂಗಳೂರು ರವರಿಗೆ 2022 ನೇ ಸಾಲಿನಲ್ಲಿ ಮಂಜೂರು ಮಾಡಲಾಗಿರುತ್ತದೆ. |
| 22 | ಮೈಸೂರು | ಹುಣಸೂರು ತಾಲ್ಲೂಕು, ಕಸಬಾ ಹೋಬಳಿ, ಮೂಕನಹಳ್ಳಿ ಗ್ರಾಮದ ಸ.ನಂ 90 ರಲ್ಲಿ 2-00 ಎಕರೆ ಜಮೀನನ್ನು ಒಕ್ಕಲಿಗರ ಸಂಘ ಹುಣಸೂರು ರವರಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ ಮಂಜೂರು ಮಾಡಲಾಗಿರುತ್ತದೆ. |

| | | |
|---|---|---|
| 23 | ರಾಯಚೂರು | ರಾಯಚೂರು ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ. |
| 24 | ರಾಮನಗರ | ರಾಮನಗರ ಜಿಲ್ಲೆಯಲ್ಲಿ ಕಳೆದ 2019, 2020, 2021, 2022 ರ ಅವಧಿಯಲ್ಲಿ ಗೋಮಾಳ ಭೂಮಿಯನ್ನು ಯಾವುದೇ ಸಂಸ್ಥೆಗಳಿಗೆ ನೀಡಲಾಗಿರುವುದಿಲ್ಲ. |
| 25 | ಶಿವಮೊಗ್ಗ | 2022 ನೇ ಸಾಲಿನಲ್ಲಿ, ತೀರ್ಥಹಳ್ಳಿ, ತಾಲ್ಲೂಕು ಕಸಬಾ ಹೋಬಳಿ, ಸುರಳಿಬಾಳೇಬೈಲು ಗ್ರಾಮ ಸ.ನಂ 53 ರಲ್ಲಿ 1-00 ಎಕರ ಜಾಗವನ್ನು ಕ್ಷತ್ರಿಯ ಮರಾಠ ಸಂಘಕ್ಕೆ ಜಮೀನನ್ನು ಮಂಜೂರಾತಿ ನೀಡಲಾಗಿರುತ್ತದೆ. 2. ತೀರ್ಥಹಳ್ಳಿ ತಾಲ್ಲೂಕು, ಮಂಡಗದ್ದೆ ಹೋಬಳಿ, ಬೆಜ್ಜವಳ್ಳಿ ಗ್ರಾಮ ಸ.ನಂ 13 ರಲ್ಲಿ 1-00 ಎಕರ ಶ್ರೀ ಅಯ್ಯಪ್ಪಸ್ವಾಮಿ ಧಾರ್ಮಿಕ ದತ್ತಿ (ರಿ) ದೇವಸ್ಥಾನಕ್ಕೆ ಮಂಜೂರಾತಿ ನೀಡಲಾಗಿರುತ್ತದೆ. |
| 26 | ತುಮಕೂರು | ತುಮಕೂರು ಜಿಲ್ಲೆಯಲ್ಲಿ ಗೋಮಾಳ ಜಮೀನನ್ನು ಸಂಸ್ಥೆಗಳಿಗೆ ಮಂಜೂರು ಮಾಡಿರುವುದಿಲ್ಲ. |
| 27 | ಉತ್ತರಕನ್ನಡ | ಉತ್ತರ ಕನ್ನಡ ಜಿಲ್ಲೆಯಲ್ಲಿ ಕಳೆದ 2019, 2020, 2021, 2022 ರ ಅವಧಿಯಲ್ಲಿ ಗೋಮಾಳ ಭೂಮಿಯನ್ನು ಸಂಸ್ಥೆಗಳಿಗೆ ನೀಡಿರುವುದಿಲ್ಲ. |
| 28 | ಉಡುಪಿ | ಉಡುಪಿ ಜಿಲ್ಲೆಯಲ್ಲಿ, ಗೋಮಾಳ ಜಮೀನನ್ನು ಯಾವುದೇ ಸಂಸ್ಥೆಗಳಿಗೆ 2019, 2020, 2021, 2022ರ ಅವಧಿಯಲ್ಲಿ ಮಂಜೂರಾತಿ ಪ್ರಕರಣಗಳಿರುವುದಿಲ್ಲ. |
| 29 | ವಿಜಯನಗರ | ವಿಜಯನಗರ ಜಿಲ್ಲೆಯಲ್ಲಿ ಕಳೆದ 2019, 2020, 2021, 2022ರ ಅವಧಿಯಲ್ಲಿ ಯಾವುದೇ ಗೋಮಾಳ ಭೂಮಿಯನ್ನು ಸಂಸ್ಥೆಗೆ ನೀಡಿರುವುದಿಲ್ಲ. |
| 30 | ಯಾದಗಿರಿ | ಯಾದಗಿರಿ ಜಿಲ್ಲೆಯಲ್ಲಿ ಕಳೆದ 2019, 2020, 2021, 2022ರ ಅವಧಿಯಲ್ಲಿ ಗೋಮಾಳ ಭೂಮಿಯನ್ನು ಸಂಸ್ಥೆ/ಸಂಘಗಳಿಗೆ ನೀಡಿರುವ ಪ್ರಕರಣಗಳು ಇರುವುದಿಲ್ಲ. |
| 31 | ವಿಜಯಪುರ | ವಿಜಯಪುರ ಜಿಲ್ಲೆಯಲ್ಲಿ ಸದರಿ ಸಾಲಿನಲ್ಲಿ ಗೋಮಾಳ ಭೂಮಿಯನ್ನು ಸಂಸ್ಥೆಗಳಿಗೆ ನೀಡಿರುವುದಿಲ್ಲ. |

ಪ್ರಧಾನ ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿ.

(ಎಲ್ಲಾ ಜಿಲ್ಲಾಧಿಕಾರಿಗಳಿಂದ ಮಾಹಿತಿಗಳನ್ನು ಪಡೆದು ಕ್ರೋಢೀಕರಿಸಿದೆ)